ಊಟವನ್ನೂ ಮಾಡದೇ ಹಾಗೇ ಮಲಗಿಬಿಟ್ಟಿದ್ದ.

ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ ಅವನಿಗೆ. ಮುಂಜಾವಿನಲ್ಲಿ ಮಂಪರು ಆವರಿಸಿತ್ತು. ಎಚ್ಚರವಾದಾಗ ಮೈ ಬೆವೆತು ಹೋಗಿತ್ತು. ಎದೆಯೊಳಗೆ ನೂರು ಕುದುರೆ ಓಡಿದಂತಹ ನೋವು. ಬಕಾಬಕಾ ಎರಡ್ಮೂರು ಬಾರಿ ವಾಂತಿ ಮಾಡಿಕೊಂಡ. ಮೈ ನಡುಗುತ್ತಿತ್ತು. ತಲೆಸುತ್ತು. ಹೇಗೋ ತಡವರಿಸುತ್ತಾ ಬಂದು ಗಿರಿಜಿಯನ್ನು ಎಬ್ಬಿಸಿದ್ದ. ದಢಾರನೆ ಎದ್ದ ಗಿರಿಜಿ ಗಂಡನ ಎದೆ ನೀವಿದಳು. ಬಿಸಿನೀರು ಕಾಯಿಸಿಕೊಟ್ಟಳು. ಚಹಾ ಮಾಡಿಕೊಟ್ಟಳು. ನೋವು ಕಡಿಮೆಯಾಗುವ ಯಾವ ಸೂಚನೆಯೂ ಕಾಣಲಿಲ್ಲ. ಮಾವ ಮತ್ತು ಮೈದುರನ್ನು ಎಬ್ಬಿಸಿಕೊಂಡು, ಬಾಡಿಗೆ ಕಾರು ಮಾಡಿಕೊಂಡು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಓಡಿಬಂದಿದ್ದಳು.

ಹೋದ ತಕ್ಷಣವೇ ದಾಖಲು ಮಾಡಿಕೊಂಡ ಡಾಕ್ಟರ್ ಅರ್ಧಗಂಟೆಯಲ್ಲೇ ಇದು ತೀವ್ರ ಹೃದಯಾಘಾತ ಎಂಬ ಸುದ್ದಿಕೊಟ್ಟಿದ್ದರು.

* * *

'ಆಸ್ಪತ್ರೆಗೆ ಇಯ್ದರೆ ಮಣ್ಣೆ' ಎಂದು ಊರಿನ ಜನ ಯಾವಾಗಲೂ ಆಡುವ ಮಾತು ಅವಳ ತಲೆಯೊಳಗೆ ಅಲೆಯೆಬ್ಬಿಸಿತ್ತು.

ಬರಿಗೈಲಿ ಹರಿಹರದ ಸರ್ಕಾರಿ ಅಸ್ಪತ್ರೆಯಿಂದ ಹಿಂದಿರುಗಿದ ಮೇಲೆ ನಂದೀಶನನ್ನು ಶಿವಮೊಗ್ಗದ ಬಸ್ ಹತ್ತಿಸಿ, ತಾನು ಬೇವಿನಹಳ್ಳಿಯ ಬಸ್ಸು ಹಿಡಿದಳು. ಮಧ್ಯಾಹ್ನದ ಹೊತ್ತಿಗೆ ಶುರುವಾಗಿದ್ದ ಮಳೆ ಇನ್ನೂ ನಿಂತಿರಲಿಲ್ಲ. ಆಸ್ಪತ್ರೆಗೆ ಬಿಡುವಾಗಲೇ ದುಡ್ಡು ಎಲ್ಲಿ ಹೊಂದಿಸಬಹುದೆಂದು ಯೋಚಿಸಿಕೊಂಡಿದ್ದಳು. ಟ್ರ್ಯಾಕ್ಟ್ರು ಕೊಳ್ಳಲೆಂದು ಸಂಘದಲ್ಲಿ ಹಾಕಿದ್ದ ಎರಡು ಚೀಟಿಗಳ ಲೆಕ್ಕ ಹಾಕಿದಳು. ಎರಡು ಲಕ್ಷ ಬರಬಹುದು. ಉಳಿದದ್ದು ಮಾವನವರ ಬಳಿ ಕೇಳಿ ಹೊಲ ದೀಡು ಮಾಡಿ ಹಣ ಕೀಳಬೇಕೆಂದು ನಿರ್ಧರಿಸಿಕೊಂಡಳು. ಕಿಟಕಿಯಾಚೆ ನೋಡತೊಡಗಿದಳು. ಅವಳ ಕಣ್ಣೀರಿನ ಮುಂದೆ ಸುರಿಯುತ್ತಿದ್ದ ಮಳೆ ಪೇಲವವಾಗತೊಡಗಿತ್ತು.

* * *

ದೇವರೂ ಕೂಡ ಒಳಗೆ ಹೋಗಲಾರದಷ್ಟು ಭದ್ರವಾಗಿದ್ದ ಐಸಿಯುನಲ್ಲಿ ಪರಸಪ್ಪ ಮಲಗಿದ್ದ. ಕಿವಿಗೆ ಬಾಯಿಗೆ ಪೈಪುಗಳನ್ನು ತೊಡಿಸಲಾಗಿತ್ತು. ಅವನ ಪಕ್ಕದಲ್ಲಿದ್ದ ಪುಟ್ಟ ಟಿವಿಯಲ್ಲಿ ಗೆರೆಗಳು ಓಡುತ್ತಿದ್ದವು. ಆಗಾಗ ಏಳುತ್ತಿದ್ದ ವಿಲಕ್ಷಣ ಬೀಪ್ ಸದ್ದು ಪರಸಪ್ಪನ ಅಳುವಿನಂತೆ ಕೇಳಿಸುತ್ತಿತ್ತು.

ಆಪರೇಷನ್ ಮಾಡದೇ ಹೋದರೆ ಉಳಿಯೋದು ಕಷ್ಟ. ಹಣ ಕಟ್ಟಿ ಇಲ್ಲವೇ, ಆಯುಷ್ಮಾನು ಬರೆಸಿಕೊಂಡು ಬನ್ನಿ. ಆಗದೆ ಇದ್ರೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ... ಎಂದು ಡಾಕ್ಟರ್ ಬೆಳಗ್ಗೆಯಿಂದ ಮುಲಾಜಿಲ್ಲದೆ ಹೇಳುತ್ತಲೇ ಇದ್ದರು.

ರಾತ್ರಿ ಒಂಬತ್ತು ಗಂಟೆ ಹೊತ್ತಿಗೆ ಗಿರಿಜಿ ಹಣ ಹೊಂದಿಸಿಕೊಂಡು ಬಂದಿದ್ದಳು. ಬಂದವಳೇ ಕೌಂಟರಿನಲ್ಲಿ ನಿಂತು ತನ್ನ ಇಡೀ ಬದುಕನ್ನೂ, ಪರಸಪ್ಪನ್ನು ಕನಸನ್ನೂ ಅಡ ಇಡುವಂತೆ ಕಂತೆ ಕಂತೆ ಹಣವನ್ನು ತೆಗೆದು ಕಟ್ಟಿದಳು.

ಡಾಕ್ಟರು ಇವಳನ್ನು ಒಳ ಕರೆದು ಕೂರಿಸಿಕೊಂಡು ಮಾಡುವ ಆಪರೇಷನ್ ಬಗ್ಗೆ ಮಾತನಾಡಿದರು. ಇದು ನಮ್ಮ ಪ್ರಯತ್ನವಷ್ಟೆ. ಆಪರೇಷನ್ ಮಾಡಿದ ಮಾತ್ರಕ್ಕೆ ಸರಿಯಾಗಿ ಬಿಡುತ್ತದೆ ಎಂದು ಭಾವಿಸಬಾರದು. ತುಂಬಾ ರಿಸ್ಕ್ ಇದೆ. ನೋಡೋಣ. ನೀವು ಒಂದೆರಡು ಪತ್ರಗಳಿಗೆ ಸಹಿ ಮಾಡಬೇಕಾಗುತ್ತದೆಯೆಂದು ಕೆಲವು ಪತ್ರಗಳನ್ನು ನೀಡಿ ಸಹಾಯಕರ ಮೂಲಕ ಸಹಿ ಪಡೆದರು. ಬೆಳಗ್ಗೆ ಒಂಬತ್ತು ಗಂಟೆಗೆ ಆಪರೇಷನ್ ನಿಕ್ಕಿಯಾಯಿತು.

ಆ ರಾತ್ರಿಯ ಇಡೀ ಆಸ್ಪತ್ರೆಯ ದೀಪದ ಬೆಳಕನ್ನು ಗಿರಿಜಿಯ ಕೇವಲ ಎರಡೇ ಕಣ್ಣುಗಳು ತಿಂದು ಮುಗಿಸಿದವು.

ಬೆಳಗ್ಗೆ ಸರಿಯಾಗಿ ಒಂಬತ್ತು ಗಂಟೆಗೆ ಪರಸಪ್ಪನನ್ನು ಆಪರೇಷನ್ ಕೋಣೆಗೆ ತೆಗೆದುಕೊಂಡು ಹೋಗಲಾಯಿತು. ಹೊರಗೆ ಗಿರಿಜಿ, ನಂದೀಶ, ಸಂಕನಂಜಪ್ಪ ಆತಂಕದಲ್ಲಿ ಕೂತರು; ಅವರ ಎದೆ ಬಡಿತ ಅವರಿಗೇ ಕೇಳಿಸುವಂತೆ!

ಒಳ-ಹೊರಗೆ ನರ್ಸುಗಳ ಮುಖಾಂತರ ಬದುಕು ಓಡಾಡುತ್ತಿತ್ತು.

ಎಷ್ಟೊ ಹೊತ್ತಿನ ಬಳಿಕ ಆಪರೇಷನ್ ಕೋಣೆಯ ಹೊರಗಿನ ಕೆಂಪು ದೀಪ ಬೆಳಗಿತು. ಊರಲ್ಲಿ ಪರಸಪ್ಪನ ಮನೆಯ ಮುಂದೆ ಪೋಸ್ಟ್ ಮ್ಯಾನ್ ದೇವೇಂದ್ರಪ್ಪ ಸೈಕಲ್ ನಿಲ್ಲಿಸಿ ಬೆಲ್ ಬಾರಿಸತೊಡಗಿದ.

●